# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಪ್ರತಾಪಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1026 |
| ಉತ್ತರಿಸಬೇಕಾದ ದಿನಾಂಕ | 27.12.2022 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಸಚಿವರು. |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ನಗರಸಭೆಯ ವ್ಯಾಪ್ತಿಯಲ್ಲಿ ಯುಜಿಡಿ ವ್ಯವಸ್ಥೆಯನ್ನು ಈಗಾಗಲೇ ಸಂಪೂರ್ಣವಾಗಿ ಅಳವಡಿಸಲಾಗಿದೆಯೇ; (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ನಗರಸಭೆಯ ವ್ಯಾಪ್ತಿಯಲ್ಲಿ ಯುಜಿಡಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಅಳವಡಿಸಿರುವುದಿಲ್ಲ.<br><br>ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 14 ಯುಡಿಎಸ್ 2009, ದಿನಾಂಕ: 23.06.2009 ರಲ್ಲಿ ಉಳ್ಳಾಲ ನಗರಸಭೆಗೆ ಯು.ಜಿ.ಡಿ ವ್ಯವಸ್ಥೆ ಕಲ್ಪಿಸುವ ಸಲುವಾಗಿ ರೂ.65.71 ಕೋಟಿಗಳ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಕಾಮಗಾರಿಯನ್ನು 2 ಪ್ಯಾಕೇಜ್‌ಗಳಲ್ಲಿ ಕೈಗೊಳ್ಳಲಾಗಿದ್ದು, ವಿವರಗಳು ಕೆಳಗಿನಂತಿದೆ.<br><br>**ಪ್ಯಾಕೇಜ್-1** ರಲ್ಲಿ 60.50 ಕಿ.ಮೀ. ಒಳಚರಂಡಿ ಕೊಳವೆ ಮಾರ್ಗ ಅಳವಡಿಸಿ 2228 ಆರ್.ಸಿ.ಸಿ. ಮೆಷಿನ್‌ಹೋಲ್‌ಗಳನ್ನು ನಿರ್ಮಿಸಿ 2015 ರಲ್ಲಿ ಪೂರ್ಣಗೊಳಿಸಲಾಗಿದೆ.<br><br>**ಪ್ಯಾಕೇಜ್-2** ರಲ್ಲಿ 8 ವೆಟ್‌ವೆಲ್‌ಗಳು ಹಾಗೂ 2 ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ನಿರ್ಮಾಣವನ್ನು ರೂ.28.87 ಕೋಟಿಗಳ ಮೊತ್ತದಲ್ಲಿ ದಿನಾಂಕ: 27.02.2019 ರಂದು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಕಾಮಗಾರಿ ಪ್ರಗತಿಯಲ್ಲಿದೆ. |
| ಆ) | ಸದರಿ ನಗರಸಭೆಯ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲು ಈಗಾಗಲೇ ಅನುಮೋದನೆಗೊಂಡ ಎಲ್ಲಾ ಯುಜಿಡಿ ಕಾಮಗಾರಿಗಳನ್ನು | ಸದರಿ ನಗರಸಭೆಯ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲು ಈಗಾಗಲೇ ಅನುಮೋದನೆಗೊಂಡ ಎಲ್ಲಾ ಯುಜಿಡಿ ಕಾಮಗಾರಿಗಳನ್ನು ಪೂರ್ಣವಾಗಿ ಅನುಷ್ಠಾನಗೊಳಿಸಲಾಗಿರುವುದಿಲ್ಲ. ಉಳ್ಳಾಲ ನಗರದ ಭೂಮಿಯ ಮೇಲ್ಮೈಗನುಗುಣವಾಗಿ ಪ್ಯಾಕೇಜ್-2ರ ಕಾಮಗಾರಿಯನ್ನು 2 |

| | | |
|---|---|---|
| | ಪೂರ್ಣವಾಗಿ ಅನುಷ್ಠಾನ ಗೊಳಿಸಲಾಗಿದೆಯೇ;<br>ಇಲ್ಲದಿದ್ದಲ್ಲಿ, ಕಾರಣಗಳೇನು; | ವಲಯಗಳಾಗಿ ವಿಂಗಡಿಸಿದ್ದು, ಕಾಮಗಾರಿಯ ಪ್ರಗತಿ ಈ ಕೆಳಗಿನಂತಿದೆ:<br><br>**<u>ವಲಯ-1:- 4 ವೆಟ್‌ವೆಲ್ ಮತ್ತು 1 ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣ.</u>**<br>• ಕೋಡಿ ಕೋಟೆಪುರ ಎಂಬಲ್ಲಿ 1 ವೆಟ್‌ವೆಲ್ ಹಾಗೂ 6.60 MLD ಸಾಮಾರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ಚಾಲನೆಗೊಳಿಸಲು ಗೃಹ ಸಂಪರ್ಕ ವ್ಯವಸ್ಥೆಯನ್ನು ನಗರಸಭೆ ವತಿಯಿಂದ ಕೈಗೊಳ್ಳಬೇಕಾಗಿದ್ದು ಈ ವಿಷಯದ ಬಗ್ಗೆ ಶೀಘ್ರ ಕ್ರಮಕೈಗೊಳ್ಳಲು ಉಳ್ಳಾಲ ನಗರ ಸಭೆ ರವರನ್ನು ಕೋರಲಾಗಿದೆ.<br>• ಬಂಡಿಕೊಟ್ಯ ಮತ್ತು ತೊಕ್ಕೊಟ್ಟು ಜಂಕ್ಷನ್ ಬಳಿ ನಿರ್ಮಿಸಲಾಗುತ್ತಿರುವ ವೆಟ್‌ವೆಲ್ ಕಾಮಗಾರಿ ಪ್ರಗತಿಯಲ್ಲಿದ್ದು, ಭೂಮಟ್ಟದವರೆಗೆ ಪೂರ್ಣಗೊಂಡಿರುತ್ತದೆ.<br>• ಕೈಕೋ ಸುಭಾಸ್ ನಗರದಲ್ಲಿ ವೆಟ್‌ವೆಲ್ ನಿರ್ಮಿಸಲು ಸಾರ್ವಜನಿಕರ ವಿರೋಧವಿದ್ದು, ಕಾಮಗಾರಿ ಸ್ಥಗಿತವಾಗಿರುತ್ತದೆ.<br><br>**<u>ವಲಯ-2:- 4 ವೆಟ್‌ವೆಲ್ ಮತ್ತು 1 ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣ</u>**<br>• ಹೊಸಗದ್ದೆ, ಕಲ್ಲಾಪು ಬುರ್ದುಗ ಇಲ್ಲಿ 2 ವೆಟ್‌ವೆಲ್ ಹಾಗೂ 1 ಸಂಖ್ಯೆ 2.50 MLD ಸಾಮಾರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ನಿರ್ಮಾಣಕ್ಕೆ ಗುರುತಿಸಿದ ಜಾಗಕ್ಕೆ ಮಾನ್ಯ ಉಚ್ಚ ನ್ಯಾಯಾಲಯದ ತಡೆಯಾಜ್ಞೆ ಇರುತ್ತದೆ.<br>ಕಲ್ಲಾಪು, ಮೊನೆಪು ಮತ್ತು ಕಲ್ಲಾಪು ಪಟ್ಲ ಬಳಿ 2 ವೆಟ್‌ವೆಲ್‌ಗಳನ್ನು ನಿರ್ಮಿಸಲು ಸಾರ್ವಜನಿಕರ ವಿರೋಧವಿದ್ದ ಕಾರಣ, ನಗರಸಭೆಯಿಂದ ಜಾಗಗಳನ್ನು ಹಸ್ತಾಂತರಿಸಿರುವುದಿಲ್ಲ. |

| | | |
|---|---|---|
| ಇ) | ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಯುಜಿಡಿ ವ್ಯವಸ್ಥೆಯನ್ನು ಕಲ್ಪಿಸಿ, ನೈರ್ಮಲ್ಯ ಕಾಪಾಡಲು ಕ್ರಮವಹಿಸಲಾಗುವುದು? | ಈ ಯೋಜನೆಯಡಿ ನಿರ್ಮಿಸಲು ಉದ್ದೇಶಿಸಿರುವ ಒಟ್ಟು 8 ವೆಟ್‌ವೆಲ್‌ಗಳ ಪೈಕಿ ವಲಯ-1ರಲ್ಲಿ ಒಂದು ವೆಟ್‌ವೆಲ್ ಕಾಮಗಾರಿ ಪೂರ್ಣಗೊಂಡಿದ್ದು, ಎರಡು ವೆಟ್‌ವೆಲ್‌ಗಳ ಕಾಮಗಾರಿಗಳು ಪ್ರಗತಿಯಲ್ಲಿವೆ. ನಗರ ಸಭೆ ವತಿಯಿಂದ ಒಳಚರಂಡಿ ಗೃಹ ಸಂಪರ್ಕಗಳನ್ನು ಕಲ್ಪಿಸಿದಲ್ಲಿ ಉಳ್ಳಾಲ ನಗರದಲ್ಲಿ ಭಾಗಶ: ಒಳಚರಂಡಿ ವ್ಯವಸ್ಥೆ ಕಲ್ಪಿಸಿದಂತಾಗುತ್ತದೆ ಹಾಗೂ ಉಳಿದ 5 ವೆಟ್‌ವೆಲ್‌ಗಳ ಹಾಗೂ 1 ಎಸ್.ಟಿ.ಪಿ ಘಟಕದ ಜಾಗಗಳನ್ನು ಮಂಡಳಿಗೆ ಹಸ್ತಾಂತರಿಸಿದ ನಂತರ ಕಾಮಗಾರಿಗಳನ್ನು ಕೈಗೊಂಡು ಸಂಪೂರ್ಣವಾಗಿ ಯು.ಜಿ.ಡಿ ವ್ಯವಸ್ಥೆ ಅಳವಡಿಸಲು ಕ್ರಮವಹಿಸಲಾಗುವುದು. |

ಸಂಖ್ಯೆ : ನಅಇ 208 ಯುಎಂಎಸ್ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು